ಹಲವು ಇರಬಹುದು. ಇವು 5 ಸೆ.ಮೀ ಗಿಂತ ಹೆಚ್ಚು ದೊಡ್ಡದಾಗುವುದಿಲ್ಲ. ಮತ್ತು ಏನೂ ತೊಂದರೆ ಕೊಡದೇ ಇರಬಹುದು. ಹಾಗೆಯೇ ಒಡೆದು ಹೋಗಬಹುದು. ಕೆಲವೊಮ್ಮೆ ಸ್ವಲ್ಪ ದೊಡ್ಡ ಸಿಸ್ಟ್ ಇದ್ದಾಗ ಆಗಾಗ್ಗೆ ಕೆಳಹೊಟ್ಟೆಯ ನೋವು, ಮುಟ್ಟಿನ ರಕ್ತಸ್ರಾವದಲ್ಲಿ ಏರುಪೇರಾಗುವುದು ಮತ್ತು ಗಂಡ ಹೆಂಡಿರ ಲೈಂಗಿಕ ಸಂಪರ್ಕದಲ್ಲಿ ಸ್ವಲ್ಪ ನೋವಾಗುವುದು ಇವೆಲ್ಲಾ ಆಗಬಹುದು. ಇವು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್‌ನಲ್ಲಿ ಸುಲಭವಾಗಿ ಪತ್ತೆಯಾಗುತ್ತವೆ.

ಇವು 46 ತಿಂಗಳಲ್ಲಿ ಹಾಗೆಯೇ ಕರಗಿ ಹೋಗುತ್ತದೆ. ಕೆಲವೊಮ್ಮೆ ಒಂದೆರಡು ತಿಂಗಳು ಮುಟ್ಟು ಬರದೆ ಮಹಿಳೆ ಆತಂಕಗೊಂಡಲ್ಲಿ ಮೆಡ್ರಾಕ್ಸಿ ಪ್ರೊಜೆಸ್ಟಿರಾನ್ ಎಸಿಟೇಟ್ (ಎಂ.ಪಿ.ಎ) 10.ಮಿ.ಗ್ರಾಂ ಮಾತ್ರೆಯನ್ನು 5 ದಿನ ಕೊಡಬೇಕಾಗಬಹುದು. ಹೆಚ್ಚು ಸಿಸ್ಟ್‌ಗಳಿದ್ದಾಗ ಕೆಲವೊಮ್ಮೆ 23 ತಿಂಗಳು ಗುಳಿಗೆ ಕೊಡಬೇಕಾಗಬಹುದು.

**ಲೂಟಿನ್ ಸಿಸ್ಟ್**


ಇವುಗಳಲ್ಲಿ ಎರಡು ವಿಧ.

ಕಾರ್ಪಸ್‌ಲ್ಯೂಟಿಯಸ್ ಸಿಸ್ಟ್

ಈ ಸಿಸ್ಟ್ ಯಾವುದೇ ರೀತಿಯ ತೊಂದರೆ ಮಾಡದೇ ಹಾಗೆಯೇ ಕರಗಿ ಹೋಗುತ್ತದೆ. ಹಲವೊಮ್ಮೆ ಸಿಸ್ಟ್‌ನಲ್ಲಿ ರಕ್ತಸ್ರಾವವಾಗಿ ಹೊಟ್ಟೆನೋವು ಬರಬಹುದು. ಆಗ ವೈದ್ಯರಿಗೆ ಇದು ನಳಿಕಾ ಗರ್ಭದಿಂದ ನೋವು ಬಂದಿರಬಹುದೆಂಬ ಭಾವನೆಯು ಬರಬಹುದು. ಈ ಸಿಸ್ಟನ್ನು ಸ್ಕ್ಯಾನಿಂಗ್ ಮಾಡಿದಾಗ ಜೇಡರಬಲೆ ಆಕಾರದಲ್ಲಿ ಇದು ಕಾಣಿಸಿಕೊಳ್ಳುತ್ತದೆ.

## ಥೀಕಾಲೂಟೀನ್ ಸಿಸ್ಟ್

ಈ ಸಿಸ್ಟ್ ಹೆಚ್ಚಾಗಿ ಎರಡೂ ಕಡೆ ಇರುತ್ತದೆ ಮತ್ತು ದ್ರಾಕ್ಷಾ ಗರ್ಭದಲ್ಲಿ, ಬಂಜೆತನ ಚಿಕಿತ್ಸೆ ತೆಗೆದುಕೊಂಡಾಗ ಆಗಬಹುದು. ತಾನೇ ತಾನಾಗಿ ಕರಗಿ ಹೋಗುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿಲ್ಲ. ಕೆಲವೊಮ್ಮೆ ಅಂಡಾಶಯದಲ್ಲಿ ಹಲವಾರು ಸಿಸ್ಟ್‌ಗಳು ಇರಬಹುದು. ಪಿಟ್ಯೂಟರಿ ಗ್ರಂಥಿಯ ಗಡ್ಡೆಗಳಾದಾಗ ಅಂಡಾಶಯದಲ್ಲಿ ಹಲವಾರು ಸಣ್ಣ ಸಣ್ಣ ಗಡ್ಡೆಗಳಾಗಬಹುದು ಮತ್ತು ಪಿ.ಸಿ.ಓ.ಡಿ ಸಮಸ್ಯೆಯಲ್ಲಿ 2ಸೆ.ಮೀ ಗೂ ಕಡಿಮೆ ಇರುವ ಹಲವು ಸಿಸ್ಟ್‌ಗಳಾಗಬಹುದು. ಚಾಕೊಲೇಟ್ ಸಿಸ್ಟ್ ಹಾಗೂ ಡರ್ಮಾಯಿಡ್ ಸಿಸ್ಟ್‌ಗಳು ಅಂಡಾಶಯದಲ್ಲಿ ಆಗಬಹುದು.



### ಚಿಕಿತ್ಸೆ ಏನು?

ಇದು ಯಾವ ರೀತಿಯ ಗಡ್ಡೆ ಇದೆ, ವಯಸ್ಸಿನ ಆಧಾರದ ಮೇಲೆ ಅವಲಂಬಿಸಿರುತ್ತದೆ. ಇನ್ನು ಮಕ್ಕಳಾಗ ಬೇಕಿದ್ದಾಗ ವಯಸ್ಸು ಚಿಕ್ಕದಿದ್ದಲ್ಲಿ ಗಡ್ಡೆಯನ್ನು ಮಾತ್ರ ಅಂಡಾಶಯದಿಂದ ಬೇರ್ಪಡಿಸಲು ಪ್ರಯತ್ನಿಸಿ. ಗಡ್ಡೆಯನ್ನಷ್ಟೇ ತೆಗೆದು ಅಂಡಾಶಯವನ್ನು ಉಳಿಸಲು ಪ್ರಯತ್ನಿಸಲಾಗುವುದು. ಗಡ್ಡೆಯನ್ನು ಬೇರ್ಪಡಿಸಲಾಗದಿದ್ದಲ್ಲಿ ಅಂಡಾಶಯದ ಸಹಿತ ಗಡ್ಡೆಯನ್ನು ತೆಗೆಯಲಾಗುತ್ತದೆ. ಉಳಿದ ಇನ್ನೊಂದು ಅಂಡಾಶಯದಿಂದ ಮಕ್ಕಳಾಗುವ ಸಾಧ್ಯತೆ ಇದೆ.

40 ವರ್ಷದ ಮೇಲ್ಪಟ್ಟು ಗರ್ಭಾಶಯ, ಅಂಡಾಶಯ, ಗರ್ಭನಾಳ ಎಲ್ಲವನ್ನು ತೆಗೆಯಲಾಗುತ್ತದೆ. ತೆಗೆದ ಗಡ್ಡೆಯನ್ನು ಲ್ಯಾಬ್ ಪರೀಕ್ಷೆಗೆ ಕಳುಹಿಸಿ ಕ್ಯಾನ್ಸರ್ ಗಡ್ಡೆಯಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ತೆರೆದ ಶಸ್ತ್ರಚಿಕಿತ್ಸೆ ಅಥವಾ ಲ್ಯಾಪರೋಸ್ಕೋಪಿಕ್ ಅಥವಾ ಉದರದರ್ಶಕ ಚಿಕಿತ್ಸೆ ಮಾಡಿಸುವುದು ದೊರೆಯುವ ಸೌಲಭ್ಯ ಹಾಗೂ ವೈದ್ಯರ ನೈಪುಣ್ಯತೆಯನ್ನು ಅವಲಂಬಿಸಿರುತ್ತದೆ.

## ಗರ್ಭಧಾರಣೆ; ಅಂಡಾಶಯದ ಸಿಸ್ಟ್

ಕೆಲವೊಮ್ಮೆ ಗರ್ಭಿಣಿಯರಲ್ಲೂ ಇಂತ ಸಿಸ್ಟ್‌ಗಳಿದ್ದು ಹೆಚ್ಚಾಗಿ 12 ವಾರದೊಳಗೆ ಕರಗುತ್ತವೆ. ಕರಗದಿದ್ದಲ್ಲಿ ಅವಶ್ಯವಿದ್ದರೆ ಇಂತಹ ಸಿಸ್ಟ್‌ಗಳನ್ನು 1416 ವಾರದೊಳಗೆ ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಬೇಕು. ಮೊದಲ 3 ತಿಂಗಳು ಹಾಗೂ ಕೊನೆಯ 3 ತಿಂಗಳು ಇಂತಹ ಗಡ್ಡೆಗಳನ್ನು ತೆಗೆಯದಿದ್ದರೆ ವಾಸಿ. ಯಾವುದೇ ಸಮಸ್ಯೆಗಳಿಲ್ಲದಿದ್ದಲ್ಲಿ ಹಾಗೆಯೇ ಬಿಡಬಹುದು.

ಅಂಡಾಶಯದ ಸಾಧುಗಡ್ಡೆಗಳು (ಬಿನೈನ್ ಟ್ಯೂಮರ್ಸ್)

ಮಹಿಳೆಯರಲ್ಲಿ ಶೇ.35ರಷ್ಟು ಆಗುವ ಗಡ್ಡೆಗಳು ಅಂಡಾಶಯದ ಗಡ್ಡೆಗಳೇ. ಈ ಗಡ್ಡೆಗಳು ಬೇರೆ ಬೇರೆ ಜೀವಕೋಶಗಳಿಂದ ಹುಟ್ಟಿಕೊಳ್ಳಬಹುದು. ತಿಳಿನೀರಿನಂತೆ ದ್ರವವಿರುವ ಗಡ್ಡೆ (ಸೀರಸ್ ಗಡ್ಡೆ), ಲೋಳೆಯಂತಹ ಪದಾರ್ಥವಿರುವ ಗಡ್ಡೆಗಳು (ಮ್ಯೂಸಿನಸ್ ಗಡ್ಡೆಗಳು), ದೇಹದ ಎಲ್ಲಾ ಅಂಗಗಳನ್ನು ಮಾಡುವ ಸಾಮರ್ಥ್ಯವಿರುವ 3 ಕೋಶದ ಗಡ್ಡೆಗಳು (ಡರ್ಮಾಯಿಡ್ ಗಡ್ಡೆ) ಹೀಗೆ ತರ ತರಹದ ಗಡ್ಡೆಗಳುಂಟಾಗಬಹುದು. ಈ ಡರ್ಮಾಯಿಡ್ ಗಡ್ಡೆಯಲ್ಲಂತೂ ಹಲ್ಲು, ಥೈರಾಯಿಡ್ ಗ್ರಂಥಿಯ ಕೋಶ, ಜಠರದ ಒಳಪದರದ ಕೋಶ, ಚರ್ಮದಲ್ಲಿನ ಸಿಬೇಶಿಯಸ್ ಗ್ರಂಥಿ, ಮೂಳೆ ಹೀಗೆ ದೇಹದ ನಾನಾ ಅಂಗಗಳು ಸಣ್ಣ ಸಣ್ಣ ತುಣುಕಾಗಿ ಬೆಳೆದಿರುತ್ತವೆ. ಇನ್ನಿತರ ಹಲವು ರೀತಿಯ ಗಡ್ಡೆಗಳೂ ಬೆಳೆಯಬಹುದು.

ರೋಗ ಲಕ್ಷಣಗಳು

ಯಾವ ವಯಸ್ಸಿನಲ್ಲಿ ಬೇಕಾದರೂ ಆಗಬಹುದು, ಯಾವ ತೊಂದರೆಯೂ ಇಲ್ಲದೆ ಕೇವಲ ಕೆಳಹೊಟ್ಟೆ ಭಾರ ಎನಿಸಬಹುದು. ಅಕಸ್ಮಾತಾಗಿ ಬೇರೆ ಏನೋ ಕಾರಣಕ್ಕೆ ಹೊಟ್ಟೆ ಸ್ಕ್ಯಾನಿಂಗ್ ಮಾಡಿಸಿದಾಗ ಕಂಡುಬರಬಹುದು. ಗಡ್ಡೆ ದೊಡ್ಡದಾದಾಗ ಅದು ಪಕ್ಕದ ಅಂಗಗಳ ಮೇಲೆ ಒತ್ತಡದ ಪರಿಣಾಮವನ್ನುಂಟು ಮಾಡಬಹುದು. ಅಂದರೆ ಗಡ್ಡೆ ದೊಡ್ಡದಿದ್ದು ವಪೆಯಮೇಲೆ ಒತ್ತುವುದರಿಂದ ಉಬ್ಬಸ ಉಂಟಾಗಿ ಎದೆ ಜೋರಾಗಿ ಹೊಡೆದುಕೊಳ್ಳಬಹುದು.

ಹೊಟ್ಟೆಯ ರಕ್ತನಾಳಗಳ ಮೇಲೆ ಒತ್ತಡ ಬೀರಿದಾಗ ಕಾಲು ಊದಿಕೊಳ್ಳಬಹುದು. ಮೂತ್ರ ವಿಸರ್ಜನೆಗೆ ತೊಂದರೆಯಾಗಬಹುದು. ಕರುಳಿನ ಮೇಲೆ ಒತ್ತಡವಾದಾಗ ಹೊಟ್ಟೆ ತಳಮಳಿಸಿ ವಾಂತಿಯಾಗಬಹುದು. ಕೆಲವರಲ್ಲಿ ಮುಟ್ಟಿನ ಅವಧಿಯಲ್ಲಿ ಹೆಚ್ಚು ರಕ್ತಸ್ರಾವವಾಗಬಹುದು. ಗಡ್ಡೆ ಅತಿದೊಡ್ಡದಾದಾಗ ದಿನ ತುಂಬಿದ ಗರ್ಭಿಣಿಯರ ಹಾಗೆ ಹೊಟ್ಟೆ ಮುಂದೆ ಬಂದು ಹೊಟ್ಟೆಯ ಮೇಲೆ ಮಲಿನ ರಕ್ತನಾಳಗಳೇ ಎದ್ದುಕಾಣಬಹುದು.

## ಸಂಭವನೀಯ ತೊಡಕುಗಳು

ಗಡ್ಡೆ ತಿರುಚುವಿಕೆ (ಟಾರ್ಷನ್) ಅಂಡಾಶಯದ ತೊಟ್ಟಿನ ಬಳಿ ತಿರುಚುವಿಕೆ ಉಂಟಾದಾಗ ಅಂಡಾಶಯಕ್ಕೆ ರಕ್ತ ಪೂರೈಕೆ ನಿಂತುಹೋಗಿ ತೀವ್ರ ಹೊಟ್ಟೆನೋವು ಉಂಟಾಗುತ್ತದೆ. ತಿರುಚುವಿಕೆಗೆ ಕಾರಣ ಕರುಳಿನ ಚಲನೆ ಅಥವಾ ಗರ್ಭಾಶಯ ಬೆಳೆಯುವಿಕೆ ಅಥವಾ ಕುಗ್ಗುವಿಕೆ ಇರಬಹುದು. ಸ್ಕ್ಯಾನಿಂಗ್‌ನಲ್ಲಿ ಇದನ್ನು ಪತ್ತೆ ಹಚ್ಚಿ ತುರ್ತು ಶಸ್ತ್ರಚಿಕಿತ್ಸೆ ನಡೆಸಿ ಗಡ್ಡೆಯನ್ನು ತೆಗೆಯುತ್ತಾರೆ. ಅಪರೂಪಕ್ಕೊಮ್ಮೆ ಗಡ್ಡೆ ಬಿರಿದು (ಬರ್ಸ್ಟ್) ಹೊಟ್ಟೆಯೊಳಗೆಲ್ಲಾ ಚೆಲ್ಲಾಡಬಹುದು. ಆಗ ಹೊಟ್ಟೆನೋವು, ವಾಂತಿ ಶುರುವಾಗಿ ಹೊಟ್ಟೆ ಗಟ್ಟಿಯಾಗುತ್ತದೆ. ಗಡ್ಡೆಗೆ ಸೋಂಕು ತಗುಲಿ ಸುತ್ತಲಿನ ಅಂಗಾಂಶಗಳಿಗೆ ಅದು ಮೆತ್ತಿಕೊಳ್ಳಬಹುದು. ಮತ್ತು ಆಗಾಗ್ಗೆ ಸಣ್ಣ ನೋವು ಬರುತ್ತಿರಬಹುದು. ಹೊಟ್ಟೆಯಲ್ಲಿ ನೀರು ತುಂಬಿಕೊಳ್ಳಬಹುದು.

ರೋಗ ಪತ್ತೆ ಹಚ್ಚುವಿಕೆ: ದೊಡ್ಡ ಗಡ್ಡೆಗಳಿದ್ದಾಗ ಹೊಟ್ಟೆಯನ್ನು ಹಾಗೆ ಪರೀಕ್ಷಿಸಿದಾಗ ಗೊತ್ತಾಗುತ್ತದೆ. ಸ್ಕ್ಯಾನಿಂಗ್, ಉದರದರ್ಶಕ ಪರೀಕ್ಷೆಗಳು (ಲ್ಯಾಪರೋಸ್ಕೋಪಿಕ್) ಗಡ್ಡೆಗಳನ್ನು ಪತ್ತೆ ಹಚ್ಚುತ್ತವೆ.

ಲೇಖಕಿ ಭದ್ರಾವತಿಯಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ. ಸಂಪರ್ಕ: 94803 53878